# <u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>

## <u>Spl.C.143/2020</u>

**<u>P.W.-01</u>**
**<u>C.W.-01</u>**

| | | |
|---|---|---|
| ಹೆಸರು | : | ಶೀಲಾವತಿ |
| ಗಂಡನ ಹೆಸರು | : | ನಾರಾಯಣ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಬೆಲವತ್ತ ಗ್ರಾಮ, ಮೈಸೂರು |

**<u>ದಿನಾಂಕಃ 05.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –</u>**

ನನಗೆ ಬೆಲವತ್ತ ಗ್ರಾಮದ ಸರ್ವೆ ನಂ.93/29 ರಲ್ಲಿ 15 x 55 ಅಡಿಯ ನಿವೇಶನವನ್ನು ಎಲ್ಲಪ್ಪ ಎಂಬುವವರಿಂದ ಖರೀದಿಸಿದ್ದೆ. ಆ ನಿವೇಶನದಲ್ಲಿ 15 x 30 ಅಡಿ ಜಾಗದಲ್ಲಿ ನಾನು ಮನೆಯನ್ನು ಕಟ್ಟಿಕೊಂಡಿದ್ದೆ. ಉಳಿದ ಜಾಗ ಖಾಲಿ ಇತ್ತು. ಈ ಸ್ವತ್ತಿಗೆ ಸಂಬಂಧಿಸಿದಂತೆ ನಾನು 11B ದಾಖಲಾತಿ ಮಾಡಿಸಿಕೊಳ್ಳುವ ಸಲುವಾಗಿ ಅರ್ಜಿಯನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸಿದ್ದೆ. ಅರ್ಜಿ ಸಲ್ಲಿಸಿ 6 ತಿಂಗಳಾದರೂ ಏನೂ ಆಗಲಿಲ್ಲ. ಆದ್ದರಿಂದ ನಾನು ದಿಃ04.09.2018 ರಂದು ಗ್ರಾಮಪಂಚಾಯಿತಿಗೆ ಕಛೇರಿಗೆ ಹೋದೆ. ಅಲ್ಲಿ ಮೇಲುಗಡೆ ಇದ್ದಂತಹವರು, ಕೆಳಗಡೆ ಇರುವ ಮಾರಪ್ಪರವರ ಬಳಿಯಲ್ಲಿ ನಿಮ್ಮ ಅರ್ಜಿಯನ್ನು ಕಳುಹಿಸಿಕೊಟ್ಟಿರುತ್ತೇನೆ, ಅವರಲ್ಲಿ ಹೋಗಿ ವಿಚಾರಿಸಿ ಎಂದು ಹೇಳಿ ಮಾರಪ್ಪರವರ ಫೋನು ನಂಬರ್ ಸಹ ಕೊಟ್ಟರು. ನಂತರ ನಾನು ಕೆಳಗಡೆ ಹೋಗಿ ನೋಡಲಾಗಿ, ಅಲ್ಲಿ ಮಾರಪ್ಪ ಇರಲಿಲ್ಲ. ಆಗ ನಾನು ಅವರಿಗೆ ಫೋನು ಮಾಡಿದೆ. ಅವರು ನಾನು ಬೆಲವತ್ತದಲ್ಲಿಯೇ ಇದ್ದೇನೆ. ಅಲ್ಲಿಗೆ ಬನ್ನಿ ಎಂದು ಹೇಳಿದರು. ಆಗ ನಾನು ನಮ್ಮ ಮನೆಗೆ ಹೋದೆ. ನಾನು ಮನೆಯಲ್ಲಿದ್ದಾಗ ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಮಾರಪ್ಪ ನಮ್ಮ ಮನೆಯ ಬಳಿಗೆ ಬಂದರು. ನಾನು, 'ನೀವು ಮನೆಯ ಬಳಿಗೆ ಬಂದು ಮನೆಯನ್ನು ನೋಡಿದ್ದಿರಲ್ಲವೇ ಸರ್' ಎಂದು ಕೇಳಿದೆ. ಆಗ ಅವರು 'ಹೌದಮ್ಮ, ನೋಡಿದ್ದೇನೆ'

ಎಂದರು. ನಾನು ಅವರಲ್ಲಿ, ಅರ್ಜಿಯನ್ನು ಹಾಕಿ 6 ತಿಂಗಳಾಯಿತು, 11B ಯನ್ನು ಮಾಡಿಕೊಡಿ ಎಂದು ಕೇಳಿದೆ. ಆಗ ನಾನು ಎಲ್ಲಿಗೆ ಬರಬೇಕು, ಎಷ್ಟು ಹಣ ಕೊಡಬೇಕು ಎಂದು ಕೇಳಿದೆ. ಅದಕ್ಕೆ ಅವರು, ಸುಮಾರು ರೂ.15000-20000 ರೂ ಖರ್ಚಾಗುತ್ತದೆ ಎಂದರು. ಆಗ ನಾನು ಆ ರೂ.15000–20000 ಹಣಕ್ಕೆ ಬಿಲ್ಲು ಹಾಕಿ ಕೊಡುತ್ತೀರಾ ಎಂದು ಕೇಳಿದೆ. ಅದಕ್ಕೆ ಅವರು 'ಹಾಗೆ ಎಲ್ಲಿ ಕೊಡಲು ಆಗುತ್ತದೆ, ಕಛೇರಿಯಲ್ಲಿರುವವರಿಗೆಲ್ಲಾ ಆ ಹಣವನ್ನು ಕೊಡಬೇಕು' ಎಂದರು. ಆಗ ನಾನು, 'ಅಷ್ಟು ಹಣವನ್ನು ಕೊಡಲು ಆಗುವುದಿಲ್ಲ, ನಾವು ಬಡವರು' ಎಂದು ಹೇಳಿದೆ. ಆಗ ಅವರು 'ಆಯಿತು, ರೂ.12000/– ಕೊಡಿ' ಎಂದರು. ಈ ಸಂಭಾಷಣೆಯನ್ನು ನಾನು ನನ್ನ ಪುಟಾಣಿ ಫೋನಿನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೆ. ನಂತರ ಈ ಬಗ್ಗೆ ನಾವು ದಿ:05.09.2018 ರಂದು ಎಸಿಬಿ ಠಾಣೆಗೆ ಹೋಗಿ ದೂರನ್ನು ನೀಡಿದೆ. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ನಿಪಿ–1 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–1(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

2. ನಂತರ ಎಸಿಬಿ ಪೊಲೀಸರು ಆ ಕಛೇರಿಗೆ ಎಂ.ಶ್ರೀಪತಿ ಮತ್ತು ನವೀದ್ ಪಾಷ ಎನ್ನುವವರು ಕರೆಯಿಸಿದ್ದರು. ನಂತರ ಅಲ್ಲಿದ್ದಂತಹ ಇನ್ಸ್ ಪೆಕ್ಟರ್ ಶೇಖರ್ ರವರು ನನಗೆ ಅವರುಗಳನ್ನು ಪರಿಚಯಿಸಿದರು. ಅವರಿಬ್ಬರಿಗು ದೂರನ್ನು ಓದಲು ಕೊಟ್ಟರು, ಅವರು ಓದಿಕೊಂಡರು. ಶ್ರೀಪತಿಯವರನ್ನು 1 ನೇ ಪಂಚಸಾಕ್ಷಿ ಎಂತಲೂ, ನವೀದ್ ಪಾಷರನ್ನು 2 ನೇ ಪಂಚಸಾಕ್ಷಿ ಎಂದು ಹೆಸರಿಸಿದರು. ನಂತರ ನಾನು ತಂದಿದ್ದಂತಹ ರೂ.2000/– ಮುಖಬೆಲೆಯ 6 ನೋಟುಗಳನ್ನು ಇನ್ಸಪೆಕ್ಟರ್ ಶೇಖರರವರ ಮುಂದೆ ಹಾಜರು ಪಡಿಸಿದೆ. ನಂತರ ಆ ಹಣವನ್ನು 1 ನೇ ಪಂಚಸಾಕ್ಷಿದಾರರ ಕೈಯಲ್ಲಿ ಕೊಟ್ಟರು. ನಂತರ ಅವರು ಓದಿ ಹೇಳಿದಂತೆ 2 ನೇ ಪಂಚಸಾಕ್ಷಿದಾರರು ಆ ನೋಟಿನ ಸಂಖ್ಯೆಗಳನ್ನು ಪ್ರತ್ಯೇಕ ಬಿಳಿ ಹಾಳೆಯ ಮೇಲೆ ಬರೆದುಕೊಂಡರು. ಅದನ್ನು ನಾನೀಗ ನೋಡುತ್ತಿದ್ದೇನೆ. ನಂತರ ಆ ನೋಟುಗಳನ್ನು ಒಂದು ಬಿಳಿಯ ಹಾಳೆಯ ಮೇಲೆ ಇರಿಸಿ, ಎಸಿಬಿ ಸಿಬ್ಬಂದಿಯವರು ಆ ನೋಟುಗಳಿಗೆ ಫಿನಾಪ್ತಲೀನ್ ಪೌಡರನ್ನು ಲೇಪಿಸಿದರು. ನಂತರ ಆ ನೋಟುಗಳನ್ನು ಒಂದು ಪ್ರತ್ಯೇಕ ಕವರಿನಲ್ಲಿ ಹಾಕಿ ಚಾಸಾ–2 ರವರು ನನ್ನ ಕೈಗೆ ಕೊಟ್ಟರು. ಇನ್ಸ್ ಪೆಕ್ಟರ್ ರವರು ನನಗೆ ಆ ಕವರನ್ನು ಯಾವಾಗಲೂ ತೆಗೆಯಬಾರದು, ಆರೋಪಿಗೆ ಕೊಡುವಾಗ ಮಾತ್ರವೇ ಮುಟ್ಟಬೇಕು ಎಂದು

ಹೇಳಿದ್ದರು. ನಂತರ ಹಣವನ್ನು ಆರೋಪಿಗೆ ಕೊಟ್ಟ ನಂತರ, ನಾನು ಸೆರಗಿನಲ್ಲಿ ಮುಖ ಒರೆಸಿಕೊಳ್ಳುವ ಮೂಲಕ ಅವರಿಗೆ ಸೂಚನೆಯನ್ನು ಕೊಡಬೇಕು ಎಂದು ಹೇಳಿದರು. ನಂತರ ಚಾಸಾ–2 ರವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದರು. ಆಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಗಾಜಿನ ಬಾಟಲಿಯಲ್ಲಿ ಶೇಖರಿಸಿ, ನಂತರ ಬಟ್ಟೆಯಲ್ಲಿ ಸುತ್ತಿ ಸೀಲು ಮಾಡಿದರು. ಸದರಿ ಬಾಟಲನ್ನು ನಾನೀಗ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಅದನ್ನು ಮು.ಮಾ.1 ಎಂದು ಗುರುತು ಪಡಿಸಿಕೊಳ್ಳಲಾಯಿತು. ಉಳಿದ ಫಿನಾಪ್ತಲೀನ್ ಪೌಡರನ್ನು ಒಂದು ಪ್ರತ್ಯೇಕ ಕವರಿನಲ್ಲಿ ಹಾಕಿ ಶೇಖರಿಸಿದರು. ಸೀಲು ಮಾಡಿದ ಕವರನ್ನು ನ್ಯಾಯಾಲಯದಲ್ಲಿ ತೆರೆದು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಫಿನಾಪ್ತಲೀನ್ ಪೌಡರನ್ನು ಗುರುತಿಸಿರುತ್ತಾರೆ. ಅದನ್ನು ಮು.ಮಾ.2 ಎಂದು ಗುರುತು ಪಡಿಸಿಕೊಳ್ಳಲಾಯಿತು.

3. ನಂತರ ನನ್ನ ಮೊಬೈಲಿನಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪಿಗೆ ಅಳವಡಿಸಿ ರೆಕಾರ್ಡ್ ಮಾಡಿಕೊಂಡು 3 ಸಿಡಿಗಳಿಗೆ ವರ್ಗಾಯಿಸಿಕೊಂಡರು. ನಂತರ ಆ ಸಂಭಾಷಣೆಯನ್ನು ಕೇಳಿಸಿದರು. ನನ್ನ ಮೊಬೈಲಿನ ಚಿಪ್ಪನ್ನು ಪೊಲೀಸರು ತೆಗೆದುಕೊಂಡರು. ಸೀಲು ಮಾಡಿದ ಕವರಿನಲ್ಲಿದ್ದ ಚಿಪ್ಪನ್ನು ಸಾಕ್ಷಿಗೆ ತೆರೆದು ತೋರಿಸಲಾಗಿ, ಅದನ್ನು ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.3 ಎಂದು ಗುರುತು ಪಡಿಸಿಕೊಳ್ಳಲಾಯಿತು. ನಂತರ ನನಗೆ ಒಂದು ವಾಯ್ಸ್ ರೆಕಾರ್ಡರನ್ನು ನೀಡಿದರು. ಈ ಮೇಲ್ಕಂಡ ಎಲ್ಲಾ ಪ್ರಕ್ರಿಯೆಗಳ ಬಾಬ್ತು ಮಹಜರ್ ಮಾಡಿದರು. ಸದರಿ ಮಹಜರಿಗೆ ನಾನು ಸಹಿ ಹಾಕಿರುತ್ತೇನೆ. ಸಾಕ್ಷಿ ಮಹಜರ್ ಮೇಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಮಹಜರನ್ನು ಗುರುತು ಪಡಿಸುವಲ್ಲಿ ಆರೋಪಿ ಪರ ವಕೀಲರು ತಕರಾರನ್ನು ಎತ್ತಿದ್ದು, ಕಲಂ 65(ಬಿ) ಭಾರತ ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ಸಲ್ಲಿಸಿರುವ ದೃಡೀಕರಣ ಪತ್ರ ಕಾನೂನು ರೀತ್ಯಾ ಇರುವುದಿಲ್ಲ ಎಂದು ತಕರಾರು ಎತ್ತಿದ್ದು, ಸದರಿ ಕಲಂ 65(ಬಿ) ದೃಡೀಕರಣ ಪತ್ರವನ್ನು ನ್ಯಾಯಾಲಯ ಪರಿಶೀಲಿಸಿ ನಂತರ ಪ್ರಾಯೋಗಿಕ ಮಹಜರನ್ನು **ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು** ನಿಪಿ–2 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–2(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು. ಈ ಪ್ರಕ್ರಿಯೆಗಳು ನಡೆಯುತ್ತಿದ್ದ ಕಾಲಕ್ಕೆ ಫೋಟೋಗಳನ್ನು ತೆಗೆಯುತ್ತಿದ್ದರು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನಾನೀಗ ನೋಡುತ್ತಿದ್ದೇನೆ. ಅವುಗಳು ಒಟ್ಟು 7 ಇದ್ದು, ಅವುಗಳನ್ನು ಗುರುತು

ಪಡಿಸುವಲ್ಲಿ ಆರೋಪಿ ಪರ ವಕೀಲರು ತಕರಾರನ್ನು ಎತ್ತಿದ್ದು, ಕಲಂ 65(ಬಿ) ಭಾರತ ಸಾಕ್ಷ ಅಧಿನಿಯಮದ ಅಡಿಯಲ್ಲಿ ಸಲ್ಲಿಸಿರುವ ದೃಡೀಕರಣ ಪತ್ರ ಕಾನೂನು ರೀತ್ಯಾ ಇರುವುದಿಲ್ಲ ಎಂದು ತಕರಾರು ಎತ್ತಿದ್ದು, ಸದರಿ ಕಲಂ 65(ಬಿ) ದೃಡೀಕರಣ ಪತ್ರವನ್ನು ನ್ಯಾಯಾಲಯ ಪರಿಶೀಲಿಸಿ ನಂತರ ಆ ಫೋಟೋಗಳನ್ನು **ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು** ನಿಪಿ-3 ರಿಂದ 9 ಎಂದು ಗುರುತು ಪಡಿಸಿಕೊಳ್ಳಲಾಯಿತು.

4. ದಿಃ05.09.2018 ರಂದು ಎಸಿಬಿ ಅಧಿಕಾರಿಗಳು, ಸಿಬ್ಬಂದಿ, ಪಂಚರು ಮತ್ತು ನಾನು ಮಧ್ಯಾಹ್ನ 2.00 ರಿಂದ 2.15 ರ ಸಮಯಕ್ಕೆ ಬೆಲವತ್ತದ ಗ್ರಾಮ ಪಂಚಾಯಿತಿಗೆ ಹೊರಟೆವು. ಕಛೇರಿಯಿಂದ ಸ್ವಲ್ಪ ದೂರದಲ್ಲಿ ವಾಹನಗಳನ್ನು ನಿಲ್ಲಿಸಿದೆವು. ಇನ್ಸ್ ಪೆಕ್ಟರ್ ರವರು ನನಗೆ ಮಾರಪ್ಪರವರಿಗೆ ಫೋನು ಮಾಡಲು ತಿಳಿಸಿದರು. ನಾನು ಅವರಿಗೆ ಫೋನು ಮಾಡಿದೆ, ಆಗ ಅವರು 'ನಾನು ಬೆಲವತ್ತಕ್ಕೆ ಬಂದಿಲ್ಲ, ಕಛೇರಿಯಲ್ಲೂ ಇಲ್ಲ, ಹೊರಗಡೆ ಇದ್ದೇನೆ' ಎಂದು ತಿಳಿಸಿದರು. ನಂತರ ಎಲ್ಲರೂ ವಾಪಸ್ಸು ಮೈಸೂರಿನ ಎಸಿಬಿ ಕಛೇರಿಗೆ ಹಿಂತಿರುಗಿದೆವು.

5. ನಂತರ ಪುನಃ ಚಾಸಾ-3 ರವರು ನೋಟುಗಳನ್ನು ಪರಿಶೀಲಿಸಿ ನನಗೆ ಕೊಟ್ಟರು. ಇನ್ಸ್ ಪೆಕ್ಟರ್ ರವರು ನನ್ನ ಕೈನಿಂದಲೇ ಆ ನೋಟುಗಳು ಇರುವ ಪ್ಯಾಕೆಟನ್ನು ಕಛೇರಿಯ ಬೀರುವಿನಲ್ಲಿ ಇರಿಸಿದರು. ನಾನು ಮೊಬೈಲಿನಿಂದ ಆರೋಪಿಯೊಂದಿಗೆ ಮಾತನಾಡಿದೆ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಪುನಃ ಎಸಿಬಿ ಕಛೇರಿಯಲ್ಲಿ ಲ್ಯಾಪ್ ಟಾಪಿಗೆ ಹಾಕಿ ಸಿಡಿಗೆ ಅಳವಡಿಸಿ, ಟೈಪ್ ಮಾಡಿಕೊಂಡರು. ಈ ಬಗ್ಗೆ ಪುನಃ ಒಂದು ಮಹಜರನ್ನು ಮಾಡಿದರು. ಸದರಿ ಮಹಜರನ್ನು ನಾನೀಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ನಾನು ಗುರುತಿಸುತ್ತೇನೆ. ಸದರಿ ಮಹಜರನ್ನು ನಿಪಿ-10 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-10(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು. ನಂತರ ಮರುದಿನ ಅಂದರೆ 6 ನೇ ತಾರೀಖಿನಂದು ಪುನಃ ಕಛೇರಿಗೆ ಬರಬೇಕೆಂದು ತಿಳಿಸಿದರು. ಇಬ್ಬರೂ ಪಂಚಸಾಕ್ಷಿದಾರರಿಗೂ ಸಹ ಮರುದಿನ ಬರಲು ತಿಳಿಸಿದರು. ಮಾರಪ್ಪರವರು ಮರುದಿನ 11.00 ಗಂಟೆಯ ಸಮಯಕ್ಕೆ ಬರಲು ಫೋನಿನಲ್ಲಿ ತಿಳಿಸಿದರು.

6. ಮರುದಿನ ಬೆಳಿಗ್ಗೆ 10.00 ಗಂಟೆಗೆ ನಾನು ಎಸಿಬಿ ಕಛೇರಿಗೆ ಬಂದೆ. ಆಗ ಪಂಚಸಾಕ್ಷಿದಾರರು ಸಹ ಬಂದರು. ಎಸಿಬಿ ಸಿಬ್ಬಂದಿಯವರು ಇದ್ದರು ಮತ್ತು ಚಾಸಾ-23 ಸಹ ಇದ್ದರು. ಬೀರುವಿನಲ್ಲಿ ಇಟ್ಟಿದ್ದ ಹಣವನ್ನು ತೆಗೆದು 1 ನೇ ಪಂಚಸಾಕ್ಷಿ ನನಗೆ ಕೊಟ್ಟರು, ನಾನು ಅದನ್ನು ನನ್ನ ಪರ್ಸಿನಲ್ಲಿ ಇಟ್ಟುಕೊಂಡೆನು. ನಂತರ ಬೆಲವತ್ತಕ್ಕೆ ಬಂದೆವು. ಸಿದ್ದಲಿಂಗಪುರ ಗ್ರಾಮಪಂಚಾಯಿತಿ ಕಛೇರಿಯಿಂದ ಸ್ವಲ್ಪ ದೂರದಲ್ಲಿ ವಾಹನಗಳನ್ನು ನಿಲ್ಲಿಸಿದೆವು. ನನಗೆ ವಾಯ್ಸ್ ರೆಕಾರ್ಡರನ್ನು ಕೊಟ್ಟಿದ್ದರು. ಪಂಚಸಾಕ್ಷಿ-2 ರವರು ನನ್ನ ಜೊತೆ ಇರಬೇಕೆಂದು ಚಾಸಾ-23 ರವರು ತಿಳಿಸಿದ್ದರು. ನಂತರ ನಾನು ಸದರಿ ಗ್ರಾಮ ಪಂಚಾಯಿತಿಯ ಒಳಕ್ಕೆ ಹೋದೆ. ನನ್ನ ಜೊತೆ ಪಂಚಸಾಕ್ಷಿ-2 ರವರು ಸಹ ಬಂದರು. ಅಲ್ಲಿ ಮಾರಪ್ಪ ಇದ್ದರು. ಅವರು ಇಂದು ನ್ಯಾಯಾಲಯದ ಮುಂದೆಯೂ ಇದ್ದಾರೆ. ಅವರನ್ನು ನಾನು ನೋಡಿ ಗುರುತಿಸುತ್ತೇನೆ.

7. ಆರೋಪಿ ನನಗೆ 10 ನಿಮಿಷ ಕುಳಿತುಕೊಳ್ಳಲು ಹೇಳಿದ್ದರು, ಹೀಗಾಗಿ ನಾನು ಪಕ್ಕದ ರೂಮಿನಲ್ಲಿ ಕುಳಿತಿದ್ದೆ. ನಂತರ ಅವರು ನನ್ನನ್ನು ಕರೆದರು. ನಾನು ಅವರು ಇದ್ದಲ್ಲಿಗೆ ಹೋದೆ. ನನ್ನ ಜೊತೆ ಚಾಸಾ-3 ರವರು ಸಹ ಬಂದರು. ನಾನು, ದುಡ್ಡು ತಂದಿದ್ದೇನೆ ಎಂದೆ. ಅವರು, ಕೊಡಿ ಎಂದರು. ನಾನು ರೂ.12000/-ಗಳನ್ನು ನನ್ನ ಬಲಗೈನಿಂದ ಕೊಟ್ಟೆ, ಅವರು ಅದನ್ನು ತಮ್ಮ ಬಲಗೈನಲ್ಲಿ ಪಡೆದು, ಎರಡು ಕೈಗಳಿಂದ ಎಣಿಸಿ, ರೂ.10000/- ಇದೆ ಎಂದುರು, ನಾನು ಸರಿಯಾಗಿ ಎಣಿಸಿ ನೋಡಿ ಎಂದೆ, ನಂತರ ರೂ.12000/- ಇದೆ ಎಂದು ಒಪ್ಪಿಕೊಂಡರು. ಅವರು ಹಣವನ್ನು ಪಡೆದು ತಮ್ಮ ಪ್ಯಾಂಟಿನ ಎಡಜೇಬಿನಲ್ಲಿ ಇಟ್ಟುಕೊಂಡರು. ನಂತರ ಅವರು, 'ಅಷ್ಟು ಕೊಟ್ಗೆ ಇಷ್ಟು ಕೊಟ್ಟೆ ಎಂದು ಎಲ್ಲಿಯೂ ಹೇಳಬೇಡಿ', 'ಅಷ್ಟೋ ಇಷ್ಟೋ ಕೊಟ್ಟೆ ಕೆಲಸ ಮಾಡಿಕೊಟ್ಟರು, ಎಂದು ಮಾತ್ರ ಹೇಳಿ' ಎಂದರು. ನಂತರ ಕಛೇರಿಯಿಂದ ಹೊರಬಂದು ನನ್ನ ಸೀರೆಯ ಸೆರಗಿನಿಂದ ಮುಖ ಒರೆಸಿಕೊಂಡು ಚಾಸಾ-23 ರವರು ಸೂಚನೆಯನ್ನು ಕೊಟ್ಟೆ, ಆಗ ಅವರೆಲ್ಲರೂ ಬಂದರು. ನಂತರ ಚಾಸಾ-23 ರವರಿಗೆ ಮಾರಪ್ಪರವರನ್ನು ನಾನೇ ತೋರಿಸಿದೆ. ಆಗ ಎಸಿಬಿ ಸಿಬ್ಬಂದಿಯವರು ಮಾರಪ್ಪರವರ ಎರಡು ಕೈಗಳನ್ನು ಹಿಡಿದುಕೊಂಡರು. ಅಲ್ಲಿ ಒಂದು ದ್ರಾವಣವನ್ನು ತಯಾರಿಸಿಕೊಂಡರು. ಆರೋಪಿಯ ಬಲಗೈಯನ್ನು ಆ ದ್ರಾವಣದಲ್ಲಿ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ ಬಟ್ಟೆಯಿಂದ ಸೀಲು ಮಾಡಿದರು. ಸದರಿ ಬಟ್ಟೆಯಿಂದ ಸೀಲು ಮಾಡಿದ ಗುಲಾಬಿ ಬಣ್ಣ ದ್ರಾವಣವಿರುವ ಬಾಟಲಿಯನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಮು.ಮಾ.4 ಎಂದು ಗುರುತು

ಪಡಿಸಿಕೊಳ್ಳಲಾಯಿತು. ನಂತರ ಆರೋಪಿಯ ಎಡಗೈಯನ್ನು ಆ ದ್ರಾವಣದಲ್ಲಿ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ ಬಟ್ಟೆಯಿಂದ ಸೀಲು ಮಾಡಿದರು. ಸದರಿ ಬಟ್ಟೆಯಿಂದ ಸೀಲು ಮಾಡಿದ ಗುಲಾಬಿ ಬಣ್ಣ ದ್ರಾವಣವಿರುವ ಬಾಟಲಿಯನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಮು.ಮಾ.5 ಎಂದು ಗುರುತು ಪಡಿಸಿಕೊಳ್ಳಲಾಯಿತು. ನಂತರ ಆರೋಪಿ ತನ್ನ ಪ್ಯಾಂಟಿನ ಜೇಬಿನಲ್ಲಿದ್ದ ಹಣವನ್ನು ತೆಗೆದುಕೊಟ್ಟರು. ನಂತರ ಆ ಹಣವನ್ನು ಚಾಸಾ-3 ರವರಿಗೆ ಕೊಟ್ಟರು. ಅವರು ಈ ಹಿಂದೆ ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿದ್ದ ನೋಟಿನ ಸಂಖ್ಯೆಗಳೊಂದಿಗೆ ಸದರಿ ನೋಟುಗಳ ಮೇಲಿರುವ ಸಂಖ್ಯೆಗಳನ್ನು ಹೋಲಿಸಿ ನೋಡಿದಾಗ, ಸಂಖ್ಯೆಗಳು ತಾಳೆಯಾದವು. ನಂತರ ಆ ಹಣವನ್ನು ಅಮಾನತು ಪಡಿಸಿಕೊಂಡರು.

8. ನಂತರ ಆರೋಪಿಗೆ ಪ್ರತ್ಯೇಕ ಪ್ಯಾಂಟಿನ ವ್ಯವಸ್ಥೆ ಮಾಡಿದರು. ಆತ ಧರಿಸಿದ ಪ್ಯಾಂಟಿನ ಎಡಜೇಬನ್ನು ಅಲ್ಲಿದ್ದ ದ್ರಾವಣದಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ಅದನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ, ಬಿಳಿ ಬಟ್ಟೆಯಿಂದ ಸೀಲು ಮಾಡಿದರು. ಆ ಬಾಟಲಿಯನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಮು.ಮಾ.6 ಎಂದು ಗುರುತು ಪಡಿಸಿಕೊಳಳಲಾಯಿತು. ಆರೋಪಿ ಧರಿಸಿದ್ದ ಪ್ಯಾಂಟನ್ನು ವಶಪಡಿಸಿಕೊಂಡರು. ಅದನ್ನು ನಾನೀಗ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಸೀಲು ಮಾಡಿದ ಕವರಿನಿಂದ ಪ್ಯಾಂಟನ್ನು ಹೊರತೆಗೆದು ಸಾಕ್ಷಿಗೆ ತೋರಿಸಿದಾಗ, ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಪ್ಯಾಂಟನ್ನು ಮು.ಮಾ.7 ಎಂದು ಗುರುತು ಪಡಿಸಿಕೊಳ್ಳಲಾಯಿತು.

9. ನನಗೆ ಕೊಟ್ಟಿದ್ದ ವಾಯ್ಸ್ ರೆಕಾರ್ಡರನ್ನು ಪುನಃ ಚಾಸಾ-23 ರವರಿಗೆ ಹಿಂದಿರುಗಿಸಿದೆ. ಅವರು ಪುನಃ ಅದನ್ನು ಲ್ಯಾಪ್ ಟಾಪಿಗೆ ಅಳವಡಿಸಿ ಸಂಭಾಷಣೆಯನ್ನು ಸಿಡಿಗೆ ವರ್ಗಾಯಿಸಿಕೊಂಡರು ಮತ್ತು ಆ ಸಂಭಾಷಣೆಯನ್ನು ಟೈಪ್ ಮಾಡಿಸಿಕೊಂಡರು. ನಂತರ ನನ್ನನ್ನು ಮತ್ತು ಆರೋಪಿಯನ್ನು ಎದುರು ಬದರು ಕೂರಿಸಿ ನಮ್ಮಿಬ್ಬರ ಧ್ವನಿಯನ್ನು ಮಾದರಿಗಾಗಿ ಪಡೆದುಕೊಂಡರು.

10. ನಂತರ ಗ್ರಾಮ ಪಂಚಾಯಿತಿಯಲ್ಲಿದ್ದ ನನ್ನ ಸ್ವತ್ತಿಗೆ ಸಂಬಂಧಪಟ್ಟಂತಹ ದಾಖಲಾತಿಗಳನ್ನು ಚಾಸಾ-23 ರವರು ತರಿಸಿಕೊಂಡರು. ಅವು ಒಟ್ಟು 12 ದಾಖಲಾತಿಗಳು. ಮೇಲ್ಕಂಡ ಪ್ರಕ್ರಿಯೆಗಳು ನಡೆಯುತ್ತಿದ್ದ ಕಾಲಕ್ಕೆ ಫೋಟೋಗಳನ್ನು ತೆಗೆದುಕೊಂಡರು. ಸದರಿ ಫೋಟೋಗಳನ್ನು ನಾನೀಗ

**Spl.C.No.143/2020**
**P.W.-01**
**C.W.-01**

ನೋಡುತ್ತಿದ್ದೇನೆ. ಅವುಗಳು ಒಟ್ಟು 9 ಇದ್ದು, ಅವುಗಳನ್ನು ಗುರುತು ಪಡಿಸಿಕೊಳ್ಳುವಲ್ಲಿ ಆರೋಪಿ ಪರ ವಕೀಲರು ತಕರಾರನ್ನು ಎತ್ತಿದ್ದು, ಕಲಂ 65(ಬಿ) ಭಾರತ ಸಾಕ್ಷ ಅಧಿನಿಯಮದ ಅಡಿಯಲ್ಲಿ ಸಲ್ಲಿಸಿರುವ ದೃಡೀಕರಣ ಪತ್ರ ಕಾನೂನು ರೀತ್ಯಾ ಇರುವುದಿಲ್ಲ ಎಂದು ತಕರಾರು ಎತ್ತಿದ್ದು, ಸದರಿ ಕಲಂ 65(ಬಿ) ದೃಡೀಕರಣ ಪತ್ರವನ್ನು ನ್ಯಾಯಾಲಯ ಪರಿಶೀಲಿಸಿ ನಂತರ ಆ ಫೋಟೋಗಳನ್ನು **ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು** ನಿಪಿ-11 ರಿಂದ 19 ಎಂದು ಗುರುತು ಪಡಿಸಿಕೊಳ್ಳಲಾಯಿತು.

11. ಈ ಮೇಲ್ಕಂಡ ಎಲ್ಲಾ ನಡವಳಿಕೆಗಳ ಬಾಬ್ತು ಮಹಜರನ್ನು ಮಾಡಿದರು. ಸದರಿ ಮಹಜರಿಗೆ ನಾನು ಸಹಿ ಹಾಕಿರುತ್ತೇನೆ. ಸದರಿ ಮಹರನ್ನು ಗುರುತಿಸುವಲ್ಲಿ ಆರೋಪಿ ಪರ ವಕೀಲರು ತಕರಾರನ್ನು ಎತ್ತಿದ್ದು, ಕಲಂ 65(ಬಿ) ಭಾರತ ಸಾಕ್ಷ ಅಧಿನಿಯಮದ ಅಡಿಯಲ್ಲಿ ಸಲ್ಲಿಸಿರುವ ದೃಡೀಕರಣ ಪತ್ರ ಕಾನೂನು ರೀತ್ಯಾ ಇರುವುದಿಲ್ಲ ಎಂದು ತಕರಾರು ಎತ್ತಿದ್ದು, ಸದರಿ ಕಲಂ 65(ಬಿ) ದೃಡೀಕರಣ ಪತ್ರವನ್ನು ನ್ಯಾಯಾಲಯ ಪರಿಶೀಲಿಸಿ ನಂತರ ಸದರಿ ಮಹಜರನ್ನು **ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು** ನಿಪಿ-20 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-20(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

12. ನಂತರ ಆರೋಪಿ ಸಮಾಜಾಯಿಷಿಯನ್ನು ನೀಡಿ, ಅದರಲ್ಲಿ, ದೂರುದಾರರ ಅವರ ಸ್ವತ್ತಿನ ಬಾಬ್ತು ತೆರಿಗೆಯನ್ನು ಕಟ್ಟಿರುವುದಿಲ್ಲ, ಈ ಸಂಬಂಧ ಹಣವನ್ನು ನೀಡಿರುತ್ತಾರೆ ಎಂದು ಬರೆದು ಕೊಟ್ಟರು. ಅದನ್ನು ಅವರ ಕೊಟ್ಟಂತಹ ಲಿಖಿತ ಸಮಾಜಾಯಿಷಿ ಸುಳ್ಳಾಗಿರುತ್ತದೆ.

13. ಈ ಬಗ್ಗೆ ನಾನು ಎಸಿಬಿ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಹಣವನ್ನು ಗುರುತಿಸುವ ಬಾಬ್ತು, ಮುಂದುವರೆದ ಮುಖ್ಯವಿಚಾಣೆಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.